# ಪ್ರಾಚ್ಯ ಲೇಖನ ಅಧ್ಯಯನ ಡಿಪ್ಲೊಮಾ

## (೨೦೨೦-೨೧, ೨೨ ಹಾಗೂ ನಂತರದ ಅವಧಿಗಾಗಿ)

'ಡಿಪ್ಲೋಮಾ ಇನ್ ಪ್ರಾಚ್ಯಲೇಖ ಅಧ್ಯಯನ' ಎಂಬ ಒಂದು ವರ್ಷದ ನಾನ್ ಸೆಮಿಸ್ಟರ ಕೋರ್ಸ್. ಇದರಲ್ಲಿ ಪತ್ರಿಕೆ-೧ ಪ್ರಾಚ್ಯಲೇಖ ಪತ್ರಿಕೆ-೨ ಹಸ್ತಪ್ರತಿಶಾಸ್ತ್ರ ಪತ್ರಿಕೆ-೩ ಶಾಸನ ಸಾಹಿತ್ಯ ಮತ್ತು ಪತ್ರಿಕೆ-೪ ದಾಖಲು ಸಾಹಿತ್ಯ ಎಂಬ ಒಟ್ಟುನಾಲ್ಕು ಪತ್ರಿಕೆಗಳಿರುತ್ತವೆ. ಪ್ರತಿಯೊಂದು ಪತ್ರಿಕೆಗೆ ೧೦೦ ಅಂಕಗಳಿದ್ದು; ಒಟ್ಟು ೪೦೦ ಅಂಕಗಳಿಗೆ ಈ ಕೋರ್ಸನ್ನು ಅಧ್ಯಯನ ಮಾಡಬೇಕಾಗುತ್ತದೆ. ಪ್ರತಿ ಪತ್ರಿಕೆಗಳಿಗೆ ಸಂಬಂಧಿಸಿದಂತೆ ತಾತ್ವಿಕತೆಯನ್ನು ಅಧ್ಯಯನ ಮಾಡಬೇಕು. ಪ್ರಾಯೋಗಿಕವಾಗಿಯೂ ಪ್ರತಿ ವಿಷಯಗಳ ಜ್ಞಾನವನ್ನು ಪಡೆದುಕೊಳ್ಳುವುದು ಆಯಾ ಪತ್ರಿಕೆಗಳ ಉದ್ದೇಶವಾಗಿದೆ. ಎಲ್ಲ ಪತ್ರಿಕೆಗಳ ವಿಷಯ ಜ್ಞಾನದೊಂದಿಗೆ ದೊರೆತ ಆಕರ ಸಾಮಗ್ರಿಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಹಿನ್ನಲೆಯಲ್ಲಿ ಚರಿತ್ರೆಯನ್ನು ಪುನರ್ ನಿರ್ಮಿಸುವ ಕಲೆಗಾರಿಕೆಯನ್ನು ಕರಗತ ಮಾಡಿಕೊಳ್ಳುವುದು ಈ ಕೋರ್ಸಿನ ಗುರಿಯಾಗಿದೆ.

ಈ ಕೋರ್ಸಗೆ ವಾರ್ಷಿಕ ಪರೀಕ್ಷೆಗಳಿದ್ದು, ಕರ್ನಾಟಕ ವಿಶ್ವವಿದ್ಯಾಲಯದ ನಿಯಮಗಳಿಗೆ ಅನುಸಾರವಾಗಿ ನಿಗದಿತ ಅವಧಿಯಲ್ಲಿ ನಡೆಯುತ್ತವೆ. ಆಯಾ ಪತ್ರಿಕೆಗಳ ಪಶ್ನೆ ಪತ್ರಿಕೆ ಮಾದರಿಗಳನ್ನು ಒದಗಿಸಲಾಗುತ್ತದೆ. ಪ್ರತಿ ಪತ್ರಿಕೆ ಅಂಕಗಳ ವಿವರಗಳನ್ನು ಒಳಗೊಂಡಿರುತ್ತದೆ. ಕ.ವಿ.ವಿ. ನಿಯಮದಂತೆ ಶೇಕಡಾ ೭೫% ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ.

## ಪತ್ರಿಕೆ–೧ ಪ್ರಾಚ್ಯಲೇಖ

ಇಂದಿನ ಯಾಂತ್ರಿಕ ಯುಗದಲ್ಲಿ ಚರಿತ್ರೆಯ ಅಧ್ಯಯನ ಕಣ್ಮರೆಯಾಗುತ್ತಿದೆ. ಸಂಸ್ಕೃತಿಯ ಅಂಶಗಳು ಗೌಣವಾಗುತ್ತಿವೆ. ಕರ್ನಾಟಕದ ಪ್ರಾಗ್ ಇತಿಹಾಸ (Pri-History) ಬಗೆಗೆ ಅಧ್ಯಯನ ಮಾಡುವುದು, ಈ ಅಧ್ಯಯನಕ್ಕೆ ಸಹಾಯಕವಾಗುವ ಆಕರ ಸಾಮಗ್ರಿ ಬಗ್ಗೆ ತಿಳಿದುಕೊಳ್ಳುವುದು. ಕಣ್ಮರೆಯಾಗಿರುವ ಇತಿಹಾಸ ಪೂರ್ವಯುಗದ ಪ್ರದೇಶ, ಊರು, ವಿಶೇಷ ಸಂಗತಿಗಳನ್ನು ಬೆಳಕಿಗೆ ತರುವುದು. ಒಟ್ಟಿನಲ್ಲಿ ಪ್ರಾಚ್ಯಲೇಖನಗಳ ಮೂಲಕ ಪ್ರಾಚ್ಯ ಸಂಗತಿಗಳನ್ನು, ಅವುಗಳ ಮಹತ್ವವನ್ನು ತಿಳಿದುಕೊಳ್ಳುವುದು ಈ ಪತ್ರಿಕೆಯ ಆಶಯವಾಗಿದೆ.

**ಘಟಕ–೧** **ಪ್ರಾಚ್ಯ ಲೇಖದ** ಅರ್ಥ, ಸ್ವರೂಪ, ಇತಿಹಾಸ, ಪ್ರಾಚ್ಯಲೇಖದ ಉದ್ದೇಶ, ಪ್ರಾಚ್ಯಲೇಖದ ಪ್ರಕಾರಗಳು ಮತ್ತು ಮಹತ್ವ.

**ಘಟಕ–೨** **ಪ್ರಾಚ್ಯ ಲೇಖ ಅಧ್ಯಯನದ ಆಕರಗಳು:** ಗುಹೆಗಳು, ಗಿಡದ ಪೊಟರೆಗಳು, ವಸ್ತುಗಳ ಅವಶೇಷ್ಗಳು, ಆಯುಧಗಳು, ಆಹಾರ ಸಾಮಗ್ರಿಗಳು, ಉದ್ಯೋಗಗಳು, ಪ್ರಾಣಿಗಳು, ಪಕ್ಷಿಗಳು, ದಿನಬಳಕೆಯ ಸಾಮಗ್ರಿಗಳು.

**ಘಟಕ–೩** **ಪ್ರಾಗ್ ಇತಿಹಾಸ ಕಾಲದ ಯುಗಗಳು**

ಹಳೆ ಶಿಲಾಯುಗ

ಸೂಕ್ಷ್ಮಶಿಲಾಯುಗ

ತಾಮ್ರಶಿಲಾಯುಗ

ಕಬ್ಬಿಣದ ಯುಗ

**ಘಟಕ–೪** **ಪ್ರಾಚ್ಯವಿದ್ಯಾ ಸಂಶೋಧನಾಲಯಗಳು**

ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು

ಕನ್ನಡ ಸಂಶೋಧನ ಸಂಸ್ಥೆ ಧಾರವಾಡ

ರಾಷ್ಟ್ರೀಯ ವಿಜ್ಞಾನ–ಇತಿಹಾಸ ಸಂಶೋಧನ ಕೇಂದ್ರ ದೆಹಲಿ

ಕರ್ನಾಟಕದ ಆಯಾ ಜಿಲ್ಲೆಗಳ ಪ್ರಾಚ್ಯ ಸಂಶೋಧನ ಕೇಂದ್ರಗಳು

**ಘಟಕ–೫** **ಕರ್ನಾಟಕದ ಇತಿಹಾಸ ಪೂರ್ವಕಾಲದ ಜನವಸತಿ ಕೇಂದ್ರಗಳು**

ಖ್ಯಾಡ, ಮಸ್ಕಿ, ಬ್ರಹ್ಮಗಿರಿ, ಕೊಪ್ಪ, ಹೆಗ್ಗಡೆಹಳ್ಳಿ, ಹೂನೂರು

## ಪತ್ರಿಕೆ–೨ ಹಸ್ತಪ್ರತಿಶಾಸ್ತ್ರ

ನಮ್ಮ ನಾಡಿನ ಸಾಹಿತ್ಯ ಪಾರಂಪರಿಕ ಜ್ಞಾನ ಹಸ್ತಪ್ರತಿಗಳಲ್ಲಿ ಅಡಗಿದೆ. ಈ ಹಸ್ತಪ್ರತಿಗಳು ನಮ್ಮ ನಾಡಿನ ಅಮೂಲ್ಯ ಸಂಪತ್ತು ಎನಿಸಿವೆ. ಇವುಗಳ ಆಧಾರದಿಂದ ಕನ್ನಡ ಗ್ರಂಥಗಳು ಪ್ರಕಟವಾಗಿವೆ. ಗ್ರಂಥೋಧ್ಯಮ ಬೆಳವಣಿಗೆ ಹೊಂದಿದೆ ಇಂಥ ಅಮೂಲ್ಯ ಆಕರ ಸಾಮಗ್ರಿಗಳ ಅಧ್ಯಯನ ಮಾಡುವುದು ಈ ಪತ್ರಿಕೆಯ ಉದ್ದೇಶವಾಗಿದೆ.

**ಘಟಕ–೧** **ಹಸ್ತಪ್ರತಿಗಳು :** ಅರ್ಥ, ಸ್ವರೂಪ, ಪ್ರಕಾರಗಳು, ಪ್ರಯೋಜನಗಳು.

**ಘಟಕ–೨** **ಹಸ್ತಪ್ರತಿ ಲಿಪಿಕಾರರು:** ವರ್ಗೀಕರಣ, ಹಸ್ತಪ್ರತಿ ಪ್ರಶಸ್ತಿಗಳು,

**ಘಟಕ–೩** **ಹಸ್ತಪ್ರತಿ ಸಂರಕ್ಷಣ ವಿಧಾನಗಳು,**

ಸಾಂಪ್ರದಾಯಿಕ ವಿಧಾನ

ಆಧುನಿಕ ವಿಧಾನ

**ಘಟಕ–೪** **ಕರ್ನಾಟಕದ ಹಸ್ತಪ್ರತಿ ಸೂಚಿಗಳು :**

ಮೈಸೂರು ವಿ.ವಿ. ಹಸ್ತಪ್ರತಿ ಸೂಚಿಗಳು

ಕರ್ನಾಟಕ ವಿ.ವಿ. ಹಸ್ತಪ್ರತಿ ಸೂಚಿಗಳು

ಗು.ವಿ.ಕ. ಹಸ್ತಪ್ರತಿ ಭಂಡಾರಗಳು

ಘಟಕ–೫ ಕರ್ನಾಟಕದ ಹಸ್ತಪ್ರತಿ ಭಂಡಾರಗಳು

ಕ.ವಿ.ವಿ. ಧಾರವಾಡ, ಮೈಸೂರು ವಿ.ವಿ., ಕನ್ನಡ ವಿ.ವಿ. ಹಂಪಿ, ಶ್ರವಣಬೆಳಗೊಳ, ಬೆಗಳೂರು ವಿ.ವಿ. ಮತ್ತು ಗುಲಬರ್ಗಾ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರಗಳು.

## ಪತ್ರಿಕೆ–೩ ಶಾಸನಶಾಸ್ತ್ರ

ಕರ್ನಾಟಕದ ಶಾಸನಗಳು ಕನ್ನಡ ಸಾಹಿತ್ಯದ ಅವಿಭಾಜ್ಯ ಅಂಗವೆನಿಸಿವೆ. ಕರ್ನಾಟಕದ ಚರಿತ್ರೆ, ಸಂಸ್ಕೃತಿ ಅಧ್ಯಯನದ ಪ್ರಮುಖ ಆಕರಗಳೆನಿಸಿವೆ. ಈ ಶಾಸನಗಳನ್ನು ರಚಿಸಿದ ಕವಿಗಳು, ವಿದ್ವಾಂಸರಾಗಿದ್ದರು. ಅವರನ್ನು ಶಾಸನ ಕವಿಗಳೆಂದು ಕರೆಯುತ್ತಾರೆ. ಶಾಸನಗಳ ರಚನಾ ಬೆಳವಣೀಗೆಯು ಕುತೂಹಲಕಾರಿಯಾಗಿದೆ. ಒಂದು ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿಯ ಎಲ್ಲ ಆಯಾಮಗಳ ಅಧ್ಯಯನ ಮಾಡಲು ಸಹಾಯ ಮಾಡುತ್ತವೆ. ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಶಾಸನ ಶಾಸ್ತ್ರ ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಈ ಪತ್ರಿಕೆ ಇಡಲಾಗಿದೆ.

**ಘಟಕ–೧** **ಶಾಸನ :** ಅರ್ಥ, ಸ್ವರೂಪ, ಪ್ರಾಮುಖ್ಯತೆ, ಶಾಸನಗಳ ಬರವಣಿಗೆ ವಿವಿಧ ಹಂತಗಳು, ಬರವಣಿಗೆ ಸಾಮಗ್ರಿಗಳು

**ಘಟಕ–೨** **ಶಾಸನಗಳ ಸಂರಕ್ಷಣೆ:** ಶಾಸನಗಳ ಅಧ್ಯಯನ ವಿವಿಧ ನೆಲೆಗಳು

ಘಟಕ–೩ ಶಾಸನ ಸಾಹಿತ್ಯಕ್ಕೆ ವಿವಿಧ ಅರಸುಮನೆತನಗಳ ಕೊಡುಗೆ

ಗಂಗರು, ಕಲ್ಯಾಣ ಚಾಲುಕ್ಯರು, ವಿಜಯನಗರ ಅರಸರು

**ಘಟಕ–೪** **ಶಾಸನಗಳ ಪಡಿಯಚ್ಚು ತೆಗೆಯುವ ವಿಧಾನ, ಬಳಸುವ ಸಾಮಗ್ರಿಗಳು**

**ಘಟಕ–೫** **ಕನ್ನಡ ಶಾಸನಗಳ ಪ್ರಕಾರಗಳು**

೧. ದಾನ ಶಾಸನಗಳು
೨. ವೀರಗಲ್ಲು ಶಾಸನಗಳು
೩. ಮಹಾಸತಿ ಶಾಸನಗಳು
೪. ನಿಷಧಿ ಶಾಸನಗಳು

# ಪತ್ರಿಕೆ–೪ ದಾಖಲು ಸಾಹಿತ್ಯ

ದಾಖಲೆಗಳು ಕರ್ನಾಟಕದ ಭಾಷೆ, ಚರಿತ್ರೆ, ಸಾಹಿತ್ಯ, ಸಂಸ್ಕೃತಿ ಅಧ್ಯಯನದ ಮಹತ್ವ ದಾಖಲೆಗಳಾಗಿವೆ. ಕನ್ನಡ ದಾಖಲು ಸಾಹಿತ್ಯವೆಂದು ಕರೆಯುವ ಇವುಗಳ ಅಧ್ಯಯನ ಬಹಳ ಮುಖ್ಯವಾಗಿದೆ. ದಾಖಲು ಸಾಹಿತ್ಯ, ಪ್ರಕಾರ ಇತ್ಯಾದಿ– ವಿಷಯಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

ಘಟಕ–೧ ದಾಖಲೆಗಳು : ಅರ್ಥ, ಸ್ವರೂಪ, ಪ್ರಕಾರಗಳು, ದಾಖಲೆಗಳ ಇತಿಹಾಸ

ಘಟಕ–೨ ದಾಖಲೆ ಬರವಣಿಗೆಯ ಸಾಧನಗಳು, ದಾಖಲೆಗಳ ನಿರ್ಮಾತೃಗಳು

ಘಟಕ–೩ ಕರ್ನಾಟಕದಲ್ಲಿ ದಾಖಲೆಗಳ ಕೇಂದ್ರಗಳು

ಭಾರತದ ಬೇರೆ ಪ್ರಾಂತಗಳಲ್ಲಿ ಕರ್ನಾಟಕದ ದಾಖಲೆಗಳು

ಘಟಕ–೪ ಕರ್ನಾಟಕದಲ್ಲಿ ದಾಖಲುಗಳ ಸಂಗ್ರಹ

ದಾಖಲೆಗಳ ಅಧ್ಯಯನ, ಪ್ರಕಟನೆಗಳ ಇತಿಹಾಸ ಇತ್ಯಾದಿ

ಘಟಕ–೫ ಕರ್ನಾಟಕದ ದಾಖಲೆಗಳು

೧. ರಾಜಕೀಯ
೨. ಸಾಮಾಜಿಕ
೩. ಸಾಂಸ್ಕೃತಿಕ
೪. ಚಾರಿತ್ರಿಕ ಮಹತ್ವ